ಇ) 1999-2000 ನೇ ಸಾಲಿನಲ್ಲಿ ರೂ. 78.75 ಲಕ್ಷ ಅನುದಾನದ ಅವಕಾಶವಿದ್ದು, ಅದೇ ಸಾಲಿನಲ್ಲಿ ರೂ. 200 ಲಕ್ಷಗಳ ಹೆಚ್ಚುವರಿ ಅನುದಾನ ಮಂಜೂರಾಗಿದೆ.

ಉಡುಪಿ ಜಿಲ್ಲೆಯ ತಾಲ್ಲೂಕು ಪಂಚಾಯತ್ ಸದಸ್ಯರಿಗೆ ಗುಂಡೇಟು

2819 (3849) ಶ್ರೀ ಜಯಪ್ರಕಾಶ್ ಹೆಗಡೆ ಕೆ. (ಬ್ರಹ್ಮಾವರ):- ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಉಡುಪಿ ಜಿಲ್ಲೆಯ ತಾಲ್ಲೂಕು ಪಂಚಾಯತ್ ಸದಸ್ಯರೋರ್ವರಿಗೆ ಗುಂಡೇಟು ತಗಲಿರುವುದು ನಿಜವೇ?

ಆ) ಗುಂಡೇಟು ಬೀಳಲು ಕಾರಣವೇನು?

ಇ) ಪೊಲೀಸ್ ಇಲಾಖೆ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :-

ಅ) ಉಡುಪಿ ತಾಲ್ಲೂಕು ಪಂಚಾಯತ್ ಸದಸ್ಯ ಧನಂಜಯ ಅಮೀನ್ ಅವರಿಗೆ ಗುಂಡೇಟು ತಗಲಿರುವುದು ನಿಜ.

ಆ) ದಿನಾಂಕ 17-9-2000 ದಂದು ಸಂಜೆ 6-30 ಗಂಟೆ ಸಮಯದಲ್ಲಿ ಧನಂಜಯ ಅಮೀನ್ ಅವರು ಅವರ ಬಾಬ್ತು ಪರವಾನಿಗೆ ಇರುವ ಪಿಸ್ತೂಲನ್ನು ಕ್ಲೀನ್ ಮಾಡುವಾಗ ಅವರ ಮಗು ಹತ್ತರಕ್ಕೆ ಬರುವುದನ್ನು ನೋಡಿ ಪಿಸ್ತೂಲನ್ನು, ತಾನು ಧರಿಸಿದ್ದ ಪಂಚೆಗೆ ಸಿಕ್ಕಿಸಿ ಮಗುವನ್ನು ಎತ್ತಲು ಬಗ್ಗಿದಾಗ, ಪಂಚೆಯಲ್ಲಿ ಸಿಕ್ಕಿಸಿದ್ದ ಪಿಸ್ತೂಲ್ ಮನೆಯೊಳಗಿನ ಮಾರ್ಬಲ್ ನೆಲದ ಮೇಲೆ ಬಿದ್ದು ಪಿಸ್ತೂಲ್ ಗುಂಡು ಸಿಡಿದು ಗಾಯ ಆಗಿದ್ದಾಗಿ ತಿಳಿದು ಬರುತ್ತದೆ.

ಇ) ಪಿಸ್ತೂಲನ್ನು ಸರಿಯಾಗಿ ಭದ್ರತೆಯಿಂದ ಇಟ್ಟುಕೊಳ್ಳದೆ ನಿರ್ಲಕ್ಷತನ ತೋರಿಸಿರುವುದರಿಂದ ಠಾಣಾಧಿಕಾರಿ ಬ್ರಹ್ಮಾವರ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ 124:2000 ಕಲಂ. 287 ಐಪಿಸಿ ಮತ್ತು ಕಲಂ 3 ಮತ್ತು 25 ಆಯುಧ ಅಧಿ ನಿಯಮದಂತೆ ಪ್ರಕರಣವನ್ನು ದಾಖಲಿಸಿದ್ದು, ಇದು ತನಿಖೆಯಲ್ಲಿರುತ್ತದೆ.

ನ್ಯಾಯಾಮೂರ್ತಿ ಆರ್. ರಾಮಕೃಷ್ಣ ಆಯೋಗದ ವರದಿ

2820 (3694) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ):- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣ ಕೃಷಾಂಕ ಕುರಿತು ಅಧ್ಯಯನ ನಡೆಸಲು ನ್ಯಾಯಮೂರ್ತಿ ಆರ್. ರಾಮಕೃಷ್ಣ ಆಯೋಗ ತನ್ನ ಅಂತಿಮ ವರದಿಯನ್ನು ಯಾವಾಗ ಸಲ್ಲಿಸಿತು;

ಆ) ಈ ಆಯೋಗದ ಶಿಫಾರಸ್ಸುಗಳೇನು?

ಇ) ಈ ಶಿಫಾರಸ್ಸುಗಳ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಈ) ಈ ಆಯೋಗವು ಯಾವಾಗ ರಚಿತಗೊಂಡಿತು ಹಾಗೂ ಇದಕ್ಕಾಗಿ ಇಲ್ಲಿಯವರೆಗೆ ಖರ್ಚಾದ ಹಣವೆಷ್ಟು?